ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

Mail Id: adpiarabic@gmail.com

ಸಂಖ್ಯೆ: ಆರ್1/ಪರೀಕ್ಷಾ ಕಾರ್ಯ/23/2023-24 ದಿನಾಂಕ:03-02-2024

## ಸುತ್ತೋಲೆ

ವಿಷಯ: ಫೆಬ್ರವರಿ 2024ರ ಮಾಹೆಯಲ್ಲಿ ನಡೆಯಲಿರುವ ಅರೇಬಿಕ್ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಸಂಬಂಧಿಸಿದ ಅರೇಬಿಕ್ ಸಂಸ್ಥೆಗಳು ಡೌನ್‌ಲೋಡ್ ಮಾಡಿಕೊಳ್ಳುವ ಬಗ್ಗೆ.

***

2023-2024ನೇ ಸಾಲಿನ ಅರೇಬಿಕ್ ಪರೀಕ್ಷೆಯನ್ನು ದಿನಾಂಕ:12/02/2024 ರಿಂದ ನಡೆಸಲು ಈಗಾಗಲೇ ಪರೀಕ್ಷಾ ವೇಳಾಪಟ್ಟಿಯನ್ನು ನಿಗಧಿಪಡಿಸಿದೆ. ಸಂಬಂಧಿಸಿದ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ನಿಮ್ಮ ಸಂಸ್ಥೆಯ ಲಾಗಿನ್‌ಗೆ ಅಪ್‌ಲೋಡ್ ಮಾಡಲಾಗುವುದು. ಅವುಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಭ್ಯರ್ಥಿಗಳಿಗೆ ವಿತರಿಸಲು ತಿಳಿಸಿದೆ. ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವ ಮೊದಲು ಈ ಕೆಳಗಿನ ಅಂಶಗಳನ್ನು ಪರಿಶೀಲಿಸುವುದು.

1. ನೀವು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಿದ ಅರ್ಜಿಗಳ ಸಂಖ್ಯೆಗನುಗುಣವಾಗಿ ಪ್ರವೇಶ ಪತ್ರಗಳು ಸರಿಯಾಗಿದೆಯೇ? ಎಂಬ ಬಗ್ಗೆ ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು.
2. ನೀವು ಅಪ್‌ಲೋಡ್ ಮಾಡಿದ ಅರ್ಜಿಗಳ ರೀತ್ಯಾ ಎಲ್ಲಾ ಪ್ರವೇಶ ಪತ್ರಗಳಲ್ಲಿ ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು, ವಿಷಯ, ಶಾಲಾ ಸಂಕೇತ, ಪರೀಕ್ಷಾ ಕೇಂದ್ರ ಸಂಕೇತ ಮತ್ತು ಕೇಂದ್ರದ ಹೆಸರು ಸರಿಯಾಗಿದೆಯೇ ಎಂಬುದನ್ನು ಪರಿಶೀಲಿಸುವುದು. ಏನಾದರೂ ತಿದ್ದುಪಡಿಯಾಗಬೇಕಾದಲ್ಲಿ ಸೂಕ್ತ ದಾಖಲೆಗಳೊಂದಿಗೆ ಮಂಡಲಿಗೆ ಪರೀಕ್ಷೆ ಮುಗಿದ ನಂತರ ದಿನಾಂಕ:19/02/2024 ರಿಂದ 26/02/2024 ರೊಳಗೆ 200/- ರೂ.ಗಳ ದಂಡ ಶುಲ್ಕವನ್ನು ಇತರೆ ಪರೀಕ್ಷೆಗಳ ನೆಫ್ಟ್ ಚಲನ್ ಮೂಲಕ ಪಾವತಿಸಿ ಸಲ್ಲಿಸಿದಲ್ಲಿ, ತಿದ್ದುಪಡಿ ಮಾಡಲಾಗವುದು. ಇಲ್ಲವಾದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ಸಂಸ್ಥೆಯ ಮುಖ್ಯಸ್ಥರೇ ಪೂರ್ಣ ಜವಾಬ್ದಾರರಾಗುತ್ತೀರಿ ಎಂದು ತಿಳಿಸಿದೆ.

**ವಿಶೇಷ ಸೂಚನೆ:** ಪರೀಕ್ಷೆಯ ಪ್ರವೇಶ ಪತ್ರ ಬಿಡುಗಡೆ ಮಾಡಿದ ನಂತರ ಪರೀಕ್ಷೆ ಮುಗಿಯುವವರೆಗೆ ಯಾವುದೇ ತಿದ್ದುಪಡಿಗಳಿಗೆ ಅವಕಾಶವಿರುವುದಿಲ್ಲ.

(ಗೋಪಾಲಕೃಷ್ಣ ಹೆಚ್.ಎನ್)
ನಿರ್ದೇಶಕರು(ಪರೀಕ್ಷೆಗಳು)

ಇವರಿಗೆ,

1. ಸಂಬಂಧಪಟ್ಟ ಅರೇಬಿಕ್ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಸಂಬಂಧಪಟ್ಟ ಡಯಟ್ ಪ್ರಾಂಶುಪಾಲರಿಗೆ ಮತ್ತು ನೋಡಲ್ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
4. ಕಛೇರಿ ಪ್ರತಿ.